(ಇಂದು ದಿನಾಂಕಃ 27-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ.ಜಿ.ಜೆ ವಕೀಲರಿಂದ ಃ**

1. ಮಾನಶೆಟ್ಟಿ ನನ್ನ ತಂದೆ ಇರುತ್ತಾರೆ. ನನ್ನ ತಾಯಿಯ ಹೆಸರು ಲಲಿತಾಬಾಯಿ ಇರುತ್ತದೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಸುಶಿಲಾಬಾಯಿ ಮತ್ತು ಲಲಿತಾಬಾಯಿ ಇರುತ್ತದೆ. ಈ ದಾವೆಯ ವಿಷಯಗಳು ನಾನೇ ಹೇಳಿ ಬರೆಸಿರುತ್ತೇನೆ. ಈ ದಾವೆ ಹಾಕುವ ಮೊದಲು ಮಾನಶೆಟ್ಟಿ,ಸುಶಿಲಾಬಾಯಿ ಹಾಗೂ ನನ್ನ ನಡುವೆ ಎಷ್ಟು ದಾವೆಗಳು ನಡೆದಿವೆ ಎಂದರೆ ಸಾಕ್ಷಿ ನಾನು ಸಣ್ಣವಳಿದ್ದಾಗ ಅಂದರೆ ಒಂದು ವರ್ಷದ ಮಗು ಇದ್ದಾಗ ಪಾಲು ಆಗಿತ್ತು ಅದು ಸರಿಯಾಗಿ ಆಗಿಲ್ಲ ಎಂದು ಹೇಳುತ್ತಾರೆ. ಮಾನಶೆಟ್ಟಿ ಮತ್ತು ಅವರ ಇಬ್ಬರು ಹೆಂಡತಿಯರ ನಡುವೆ ಮತ್ತು ಮಕ್ಕಳ ನಡುವೆ ಈಗಾಗಲೆ 3 ದಾವೆ ನಡೆದಿವೆ ಎಂದರೆ ಸರಿ. ಮೂಲ ದಾವೆ ಸಂಖ್ಯೆಃ 90/1991 ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ನಾನು ಸಣ್ಣವಳಿದ್ದೆ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ಲಲಿತಾ ನನ್ನ ತಾಯಿ ಇರುತ್ತಾರೆ. ಮೂಲ ದಾವೆ ಸಂಖ್ಯೆಃ 90/1991 ದಾವೆಯಲ್ಲಿ ನನ್ನ ತಾಯಿ ನನ್ನ ಪರವಾಗಿ ಕೇಸ ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವೆ ಸಂಖ್ಯೆಃ 90/1991 ದಾವೆ ಡಿಕ್ರಿ ಆಗಿದ್ದು ಸರ್ವೆ ನಂಬರ 162 ರಲ್ಲಿ 1 ಎಕರೆ 33 ಗುಂಟೆಯಲ್ಲಿ ಈಗಾಗಲೆ ಡಿಕ್ರಿ ಆಗಿದೆ ಎಂದರೆ ಸಾಕ್ಷಿ ಸರಿಯಾಗಿ ಹಂಚಿಕೆ ಆಗಿಲ್ಲ ನನ್ನ ಪಾಲು ನನಗೆ ಬೇಕು ಎಂದು ಹೇಳುತ್ತಾರೆ. ನನಗೆ ಈಗ 34 ವರ್ಷ ನಡೆಯುತ್ತಿದೆ. ನನಗೆ ಈಗ 45 ವರ್ಷ ಅಂತಾ ಬರೆದಿರುವುದು ತಪ್ಪು ಇರುತ್ತದೆ. ನಾನು ವಯಸ್ಸಿಗೆ ಬಂದ ನಂತರ ನನ್ನ

ತಾಯಿಯು ನನ್ನ ಪರವಾಗಿ ಮಾಡಿಕೊಂಡ ರಾಜಿ ಡಿಕ್ರಿಯನ್ನು ನಾನು ಪ್ರಶ್ನಿಸಿರುವುದಿಲ್ಲ. ಸರ್ವೆ ನಂಬರ 162 ರಲ್ಲಿ 1 ಎಕರೆ 33 ಗುಂಟೆಯ ಜಮೀನನ್ನು ಮಾನಶೆಟ್ಟಿಯವರು ನನಗೆ ನನ್ನ ತಾಯಿಗೆ ಹಾಗೂ ನನ್ನ ತಮ್ಮನಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸರಿಯಾಗಿ ಹಂಚಿಕೆ ಆಗಿಲ್ಲ ನನ್ನ ಪಾಲು ನನಗೆ ಬೇಕು ಎಂದು ಹೇಳುತ್ತಾರೆ. ಈ ಮೊದಲು ನಡೆದ 3 ದಾವೆಯ ತೀರ್ಪು ಮತ್ತು ಡಿಕ್ರಿ ರದ್ದು ಗೊಳಿಸಲು ನಾನು ಯಾವುದೇ ದಾವೆ ಸಲ್ಲಿಸಿಲ್ಲ. ನನ್ನ ತಾಯಿ ಲಲಿತಾಬಾಯಿ ನನ್ನನ್ನು ಮತ್ತು ನನ್ನ ತಮ್ಮನನ್ನು ಬೆಳೆಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಂದೆ-ತಾಯಿ ಇಬ್ಬರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ ತಾಯಿ ಹಾಗೂ ನನ್ನ ತಮ್ಮ ಒಟ್ಟಿಗೆ ಇದ್ದಾಗ ಸುಶಿಲಾಬಾಯಿ ಒಂದು ದಾವೆ ಸಲ್ಲಿಸಿದ್ದರು ಅದು ರಾಜಿ ಆಗಿದೆ ಎಂದರೆ ಸಾಕ್ಷಿ ಅವರವರು ರಾಜಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಮೊದಲನೇ ಹೆಂಡತಿ ಸುಶಿಲಾಬಾಯಿ ಮತ್ತು ಲಲಿತಾಬಾಯಿ ಎರಡನೇಯ ಹೆಂಡತಿ ಎಂದರೆ ಸಾಕ್ಷಿ ಮೊದಲನೇ ಹೆಂಡತಿ ಲಲಿತಾಬಾಯಿ ಎಂದು ಹೇಳುತ್ತಾರೆ. ಈ ಮೊದಲು ನಡೆದ 3 ದಾವೆಯಲ್ಲಿ ನನ್ನ ತಾಯಿ ತಾನು ಮಾನಶೆಟ್ಟಿಯವರ 2 ನೇ ಹೆಂಡತಿ ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾನು ಚಿಕ್ಕವಳಿದ್ದೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ಈ ದಾವೆಯಲ್ಲಿ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನಾನು ನನ್ನ ವಕೀಲರಿಗೆ ಕೇಳಿರುವುದಿಲ್ಲ. ಈ ಮೊದಲೆ ನನ್ನ ತಾಯಿಯವರು ನನ್ನ ಹಾಗೂ ನನ್ನ ತಮ್ಮನ ಪರವಾಗಿ ರಾಜಿ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನಾನು ಚಿಕ್ಕವಳಿದ್ದಾಗ ಮಾಡಿದ್ದರು ಎಂದು ಹೇಳುತ್ತಾರೆ. ನನ್ನ ಹಾಗೂ ನನ್ನ ತಾಯಿಯ ಮೊದಲೆ ಸಂಬಂಧ ಚನ್ನಾಗಿ ಇತ್ತು ಈಗ ಮದುವೆ

ನಂತರ ಯಾರು ನನ್ನ ಜೊತೆ ಮಾತನಾಡುತ್ತಿಲ್ಲ, ಅಣ್ಣ ತಮ್ಮಂದಿರು ಮನೆಗೆ ಕರೆಯುವುದಿಲ್ಲ ಎಂದು ಹೇಳುತ್ತಾರೆ. ನಾನು ಪಿ.ಯು.ಸಿ ಮುಗಿಸಿರುತ್ತೇನೆ. ಈ ಮೊದಲು ನಡೆದ 3 ದಾವೆಯಲ್ಲಿ ಎಲ್ಲಾ ವಿಷಯಗಳು ನನಗೆ ಗೊತ್ತಿದರು ಸಹ ಪಾಲು ಕೇಳಿ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿದ್ಯಾಭ್ಯಾಸ ನನ್ನ ತಾಯಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಮದುವೆಕಿಂತ ಮೊದಲು ತಂದೆ-ತಾಯಿ ಓದಿಸುತ್ತಾರೆ ಎಂದು ಹೇಳುತ್ತಾರೆ. ನಾನು ಪಾಲು ಕೇಳಬೇಕಾದರೆ 1 ಎಕರೆ 33 ಗುಂಟೆಯಲ್ಲಿ ಕೆಳಬೇಕಾಗುತ್ತದೆ ಎಂದರೆ ಸಾಕ್ಷಿ ನನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಈಗಾಗಲೆ ನನ್ನ ತಾಯಿಯು ನನ್ನ ಸೌರಕ್ಷದಾರರು ಎಂದು ನನ್ನ ಪರವಾಗಿ ರಾಜಿ ಮಾಡಿಕೊಂಡಿರುವುದರಿಂದ ಆ ಮೊದಲ ದಾವೆಯ ತೀರ್ಪು ಮತ್ತು ಡಿಕ್ರಿ ನನ್ನ ಮೇಲೆ ಬಂಧನಕಾರಿ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.